ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು
ನಿಗಮ ನಿಯಮಿತ,
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾ.ವಿ.ಸ.ನಿ.ನಿ. ಪಿ.ಪಟ್ಟಣ-571107
Telephone No :08223- 274228
E-Mail: aeeppatna@cescmysore.org

SUPPLY CORPORATION LIMITED
*(A Government of Karnataka Undertaking)*
**Assistant Executive Engineer(Ele)**
**O&M Sub Division, CESC,**
**Periyapatna -571 107**
**Website: www.cescppt@rediffmail.com**

**Company Identity Number[CIN] :- U40109KA2004SGC035177**

---

ಕ್ರಮಾಂಕ : ಸೆಸ್ಕ್/ಸ.ಕಾ.ಇಂ/ಸ.ಇಂ(ತಾಂ)/ಪಿ.ಪಟ್ಟಣ/2020-21/ 1775    ದಿನಾಂಕ:- 10/01/2022

ದಿನಾಂಕ 29.12.2021 ರಂದು ಮಧ್ಯಾಹ್ನ 11:00 ಗಂಟೆಗೆ ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ). ಕಾರ್ಯ ಮತ್ತು ಪಾಲನಾ. ವಿಭಾಗ ಚಾ.ವಿ.ಸ.ನಿ.ನಿ ಕೆ.ಆರ್ ನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಪಿರಿಯಾಪಟ್ಟಣ ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಬಿ.ಎನ್ ಚಂದ್ರಶೇಖರ್ ರವರು ಕಾರ್ಯನಿರ್ವಾಹಕ ಇಂಜಿನಿಯರ್ (ವಿ). ಕಾರ್ಯ ಮತ್ತು ಪಾಲನಾ ವಿಭಾಗ ಚಾವಿಸನಿನಿ.ಕೆ.ಆರ್ ನಗರ.
2. ಶ್ರೀ ಅನಿಲ್.ಸಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ). ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾ.ವಿ.ಸ.ನಿ.ನಿ ಪಿರಿಯಾಪಟ್ಟಣ.
3. ಶ್ರೀ ಕುಮಾರ್ ಎಸ್, ಪ್ರಭಾರ ಹಿರಿಯ ಸಹಾಯಕ. ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ. ಪಿರಿಯಾಪಟ್ಟಣ.
4. ಶ್ರೀ ಶಶಿಕುಮಾರ್ ಪಿ.ಆರ್ ಸಹಾಯಕ ಇಂಜಿನಿಯರ್ (ವಿ). ಕಾರ್ಯ ಮತ್ತು ಪಾಲನಾ ಶಾಖೆ ನಗರ.
5. ಶ್ರೀ ಸುನಿಲ್ ಸಹಾಯಕ ಇಂಜಿನಿಯರ್ (ವಿ). ಕಾರ್ಯ ಮತ್ತು ಪಾಲನಾ ಶಾಖೆ ಬೈಲಕೊಪ್ಪ.
6. ಶ್ರೀ ಜಗದೀಶ್, ಪ್ರಭಾರ ಕಿರಿಯ ಇಂಜಿನಿಯರ್ (ವಿ). ಕಾರ್ಯ ಮತ್ತು ಪಾಲನಾ ಶಾಖೆ ಚಿಟ್ಟೇನಹಳ್ಳಿ.
7. ಶ್ರೀ ಶಿವಕುಮಾರ್ ಕಿರಿಯ ಇಂಜಿನಿಯರ್ (ವಿ). ಕಾರ್ಯ ಮತ್ತು ಪಾಲನಾ ಶಾಖೆ ಹುಣಸವಾಡಿ.
8. ಶ್ರೀ ಚಂದ್ರಶೇಖರ್ ಎಂ.ಎಸ್. ಕಿರಿಯ ಇಂಜಿನಿಯರ್ (ವಿ). ಕಾರ್ಯ ಮತ್ತು ಪಾಲನಾ ಶಾಖೆ ಕಂಪಲಾಪುರ.

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ಕಚೇರಿ). ಕಾರ್ಯ ಮತ್ತು ಪಾಲನಾ ವೃತ್ತ. ಚಾ.ವಿ.ಸ.ನಿ.ನಿ ಮೈಸೂರು ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶದಂತೆ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ). ಪಿರಿಯಾಪಟ್ಟಣ ಉಪ ವಿಭಾಗ ರವರು ಮಾತನಾಡಿ ಈ ಹಿಂದಿನ ಜನ ಸಂಪರ್ಕ ಸಭೆಯಲ್ಲಿ, ಗ್ರಾಹಕರು ಹಾಜರಾಗಿ ದಾಖಲಿಸಿದ್ದ ದೂರುಗಳ ಬಗ್ಗೆ ತೆಗೆದುಕೊಂಡ ಕ್ರಮವನ್ನು ವಿವರಿಸಿ ಈ ಸಭೆಯಲ್ಲಿ ದಾಖಲಾಗುವ ಸಮಸ್ಯೆಗಳನ್ನು ಬಗೆಹರಿಸಲು ಅಗತ್ಯ ಕ್ರಮವನ್ನು ಕೈಗೊಳ್ಳುವುದಾಗಿ ಎಂದು ಸಭೆಗೆ ತಿಳಿಸಿದರು.

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿದೆ.

Scanned with CamScanner

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1 | ಶ್ರೀ ಮೂರ್ತಿ ಹೆಚ್.ಎಂ ಪಟ್ಟಣ ಗ್ರಾಮ | ಹೆಚ್.ಎಂ ಪಟ್ಟಣ ಗ್ರಾಮದಲ್ಲಿ ವಿದ್ಯುತ್ ಕಂಬವನ್ನು ತೆರವು ಮಾಡಿಕೊಡಲು ಕೋರಿ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಮಾತನಾಡಿ, ಹೆಚ್.ಎಂ ಪಟ್ಟಣ ಗ್ರಾಮದಲ್ಲಿ ವಿದ್ಯುತ್ ಕಂಬವನ್ನು ತೆರವು ಮಾಡಿಕೊಡಲು ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲು ನಗರ ಶಾಖೆ ರವರಿಗೆ ಸೂಚಿಸಿದರು. |
| 2 | ಶ್ರೀ ಪ್ರದೀಪ್ ಆವರ್ತಿ ಗ್ರಾಮ | ಆವರ್ತಿ ಗ್ರಾಮದಲ್ಲಿ ಯು.ಎನ್.ಪಿ ಯೋಜನೆಯಡಿಯಲ್ಲಿ ಪರಿವರ್ತಕ ಕೊಡಿಸಿಕೊಡಲು ಕೋರಿ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಮಾತನಾಡಿ, ನಿಗಮ ಕಛೇರಿಯಿಂದ ಪರಿವರ್ತಕಗಳ ಖರೀದಿಯ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಸರಬರಾಜು ಆದ ನಂತರ ತುರ್ತುಗತಿಯಲ್ಲಿ ಅಳವಡಿಸಲು ಕ್ರಮ ಕೈಗಳ್ಳಲಾಗುವುದೆಂದು ತಿಳಿಸಿದರು |
| 3 | ಶ್ರೀಮತಿ ಕುಳ್ಳಮ್ಮ ನವಿಲೂರು ಗ್ರಾಮ | ಶ್ರೀಮತಿ ಕುಳ್ಳಮ್ಮ ನವಿಲೂರು ರವರ ಮನೆಯ ಆರ್.ಆರ್ ಸಂಖ್ಯೆ NVL8281ರ ಬಿಲ್ಲಿನ ಮಾಪಕದ ರೀಡಿಂಗ್ ಸರಿಪಡಿಸಿಕೊಡಲು ಕೋರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಮಾತನಾಡಿ, NVL8281ರ ಬಿಲ್ಲಿನ ಮಾಪಕದ ರೀಡಿಂಗ್ ಪರಿಶೀಲಿಸಿ ಕೂಡಲೇ ಸರಿಪಡಿಸಿಕೊಡಲು ಹುಣಸವಾಡಿ ಶಾಖಾಧಿಕಾರಿಗಳಿಗೆ ಸೂಚಿಸಿದರು. |

ಸಭೆಯ ಕೊನೆಯಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರೀಶಿಲಿಸಿ ನಿಯಾಮನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ -10
ಮೌಖಿಕ ದೂರುಗಳ ಸಂಖ್ಯೆ-7
ಪತ್ರ ಲಿಖಿತ ದೂರುಗಳ ಸಂಖ್ಯೆ-3

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ))
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಚಾಲನಾ ಉಪ ವಿಭಾಗ
ಚಾ.ವಿ.ಸ.ನಿ.ನಿ. ಉಪವಿಭಾಗ
ಪಿರಿಯಾಪಟ್ಟಣ

ಪ್ರತಿಗಳು:-

1. ಮಾನ್ಯ ಅಧೀಕ್ಷಕಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಕೆ.ಆರ್ ನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ನೋಡಲ್‌ಅಧಿಕಾರಿ 220 ಕೆವಿ ಸ್ವೀಕರಣಾ ಕೇಂದ್ರ, ಹೂಟಗಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.

ಮು.ತಿ.ನೊ

Scanned with CamScanner